# ಮಂಗಳೂರು ವಿಶ್ವವಿದ್ಯಾನಿಲಯ

ಕ್ರಮಾಂಕ:MU/REG/SCT CELL/2022-23/SCT-1

ಕುಲಸಚಿವರ ಕಛೇರಿ
ಮಂಗಳಗಂಗೋತ್ರಿ-574199
Office of the Registrar
Mangalagangotri-574199
ದಿನಾಂಕ/Date:26.05.2023

**ಸುತ್ತೋಲೆ**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ SC/ST ಸಂಶೋಧನಾ ವಿದ್ಯಾರ್ಥಿಗಳಿಗೆ Ph.D ಶಿಷ್ಯವೇತನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

*********

2022-23ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗ/ಕೇಂದ್ರ ಮತ್ತುಘಟಕ ಕಾಲೇಜುಗಳಲ್ಲಿ Ph.D ವ್ಯಾಸಂಗಕ್ಕೆ ಸೇರ್ಪಡೆಗೊಂಡಿರುವ ಪರಿಶಿಷ್ಟ ಜಾತಿ/ಪಂಗಡದ ಅಭ್ಯರ್ಥಿಗಳಿಂದ Ph.D ಸಂಶೋಧನಾ ಶಿಷ್ಯವೇತನಕ್ಕೆ ಅರ್ಜಿಗಳನ್ನು ನಿಗಧಿತ ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಅರ್ಜಿ ನಮೂನೆಗಳನ್ನು www.mangaloreuniversity.ac.in ನಿಂದ ಡೌನ್ಲೋಡ್ ಮಾಡಿಕೊಳ್ಳಬಹುದಾಗಿದೆ.

ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳು/ಸ್ನಾತಕೋತ್ತರ ಕೇಂದ್ರ/ಘಟಕ ಕಾಲೇಜುಗಳಲ್ಲಿ ಪೂರ್ಣಕಾಲಿಕ ನೆಲೆಯಲ್ಲಿ Ph.D ಕೋರ್ಸ್‌ಗೆ ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳು ಮಾತ್ರ ಈ ಶಿಷ್ಯವೇತನಕ್ಕೆ ಅರ್ಹರಾಗಿರುತ್ತಾರೆ. ಸಂಶೋಧನಾ ಶಿಷ್ಯವೇತನಕ್ಕೆ ಆಯ್ಕೆಯಾದ ಅಭ್ಯರ್ಥಿಗಳಿಗೆ 3+2 ವರ್ಷದ ಅವಧಿಗೆ ಅಥವಾ ಮಹಾಪ್ರಬಂಧ ಸಲ್ಲಿಕೆ ಯಾವುದು ಮೊದಲು ಸಂಭವಿಸುತ್ತದೋ ಅಲ್ಲಿಯವರೆಗೆ ಈ ಕೆಳಗಿನ ದರದಂತೆ ಶಿಷ್ಯವೇತನ ನೀಡಲಾಗುತ್ತದೆ.

| ಕ್ರ.ಸಂ | ಸೌಲಭ್ಯದ ವಿವರ | ದರ |
|---|---|---|
| 1. | ಸಂಶೋಧನಾ ಶಿಷ್ಯವೇತನ | • ಪ್ರಥಮ 3 ವರ್ಷದ ಅವಧಿಗೆ-ರೂ.25,000/-<br>• ನಂತರದ 2 ವರ್ಷದ ಅವಧಿಗೆ 30,000/- |
| 2. | ಸಂಶೋಧನಾ ವಾರ್ಷಿಕ ಸಾದಿಲ್ವಾರು ಮೊತ್ತ | • ಕಲಾ/ವಾಣಿಜ್ಯ/ಶಿಕ್ಷಣ ನಿಕಾಯಕ್ಕೆ ರೂ.20,000/-<br>• ವಿಜ್ಞಾನ ನಿಕಾಯಕ್ಕೆ ರೂ.25,000/- |

ಅರ್ಹ ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಯನ್ನು ಸ್ನಾತಕೋತ್ತರ ಪದವಿ, SSLC ಅಂಕಪಟ್ಟಿ, RD ನಂಬ್ರ ಹೊಂದಿರುವ ಜಾತಿಪ್ರಮಾಣ ಪತ್ರಗಳ ದೃಢೀಕೃತ ಪ್ರತಿ ಹಾಗೂ ರೂ.100/- ನ್ನು ಪಾವತಿಸಿದ ಬ್ಯಾಂಕ್ ಡಿ.ಡಿ/ಚಲನ್‌ನ ಪ್ರತಿಯೊಂದಿಗೆ ಮಾರ್ಗದರ್ಶಕರು/ವಿಭಾಗದ ಮುಖ್ಯಸ್ಥರ ಮೂಲಕ ದಿನಾಂಕ 07.07.2023 ರೊಳಗೆ ಮಾನ್ಯಕುಲಸಚಿವರು ಮಂಗಳೂರು ವಿಶ್ವವಿದ್ಯಾನಿಲಯ ಆಡಳಿತ ಸೌಧ ಮಂಗಳಗಂಗೋತ್ರಿ, 574199 ಇವರಿಗೆ ಸಲ್ಲಿಸುವುದು.

ಸೂಚನೆ: ಹೊರ ರಾಜ್ಯಗಳ ಪರಿಶಿಷ್ಟ ಜಾತಿ/ಪಂಗಡದ ಅಭ್ಯರ್ಥಿಗಳು ಹಾಗೂ ಅಂಶ-ಕಾಲಿಕ ನೆಲೆಯಲ್ಲಿ ಪ್ರವೇಶಾತಿ ಪಡೆದಿರುವ ಅಭ್ಯರ್ಥಿಗಳು ಈ ಶಿಷ್ಯವೇತನವನ್ನು ಪಡೆಯಲು ಅರ್ಹರಾಗಿರುವುದಿಲ್ಲ. ಜಾತಿ ಸ್ಥಾನ ಮಾನದ ಬಗ್ಗೆ ಸುಳ್ಳು ಮಾಹಿತಿ ನೀಡಿರುವುದು ಅಥವಾ ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ಸಲ್ಲಿಸಿರುವುದು ಕಂಡುಬಂದಲ್ಲಿ ಶಿಷ್ಯವೇತನ ರದ್ದುಪಡಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು. ಹೆಚ್ಚಿನ ಮಾಹಿತಿಗಾಗಿ ಪರಿಶಿಷ್ಟ ಜಾತಿ/ಪಂಗಡದ ಘಟಕವನ್ನು ಸಂಪರ್ಕಿಸುವುದು.

ರಿಗೆ,

1. ಎಲ್ಲಾ ಸ್ನಾತಕೋತ್ತರ ವಿಭಾಗದ ಅಧ್ಯಕ್ಷರುಗಳು/ಸಂಯೋಜಕರುಗಳು ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ
2. ಅಧ್ಯಕ್ಷರು/ಸಂಯೋಜಕರುಗಳು ಜ್ಞಾನ ಕಾವೇರಿ ಸ್ನಾತಕೋತ್ತರ ಕೇಂದ್ರ ಚಿಕ್ಕ ಅಳುವಾರ, ತೊರೆನೂರು, ಕೊಡಗು
3. ಪ್ರಾಂಶುಪಾಲರು / ಸಂಯೋಜಕರುಗಳು ವಿಶ್ವವಿದ್ಯಾನಿಲಯ ಕಾಲೇಜು ಮಂಗಳೂರು/ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜು, ಮಂಗಳೂರು/ ಫೀಲ್ಡ್ ಮಾರ್ಷಲ್ ಕೆ.ಎಂ ಕಾರ್ಯಪ್ಪ ಕಾಲೇಜು, ಮಡಿಕೇರಿ

ಪ್ರತಿ;

1. ಕುಲಸಚಿವರು(ಪರೀಕ್ಷಾಂಗ) ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ
2. ಹಣಕಾಸು ಅಧಿಕಾರಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ
3. ಗ್ರಂಥಪಾಲಕರು. ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ- ಇವರಿಗೆ ಸೂಚನಾ ಫಲಕದಲ್ಲಿ ಪ್ರಕಟಿಸುವಂತೆ ತಿಳಿಸಲಾಗಿದೆ.
4. ನಿರ್ದೇಶಕರು. ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ
5. ನಿರ್ದೇಶಕರು, ಗಣಕಯಂತ್ರ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ- ಇವರಿಗೆ ವಿಶ್ವವಿದ್ಯಾನಿಲಯದ WEBSITE ನಲ್ಲಿ ಪ್ರಕಟಿಸಲು ತಿಳಿಸಲಾಗಿದೆ.
6. ಸಹಾಯಕ ಕುಲಸಚಿವರು/ಅಧೀಕ್ಷಕರು, ಶೈಕ್ಷಣಿಕ /ಅಭಿವೃದ್ಧಿ ವಿಭಾಗ ಕುಲಸಚಿವರ ಕಛೇರಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ
7. ಕುಲಪತಿಯವರ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕರು ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ